ಈ) ತಾತ್ಕಾಲಿಕ ಪಡಿತರ ಚೀಟಿಗಳನ್ನು ಸಮೀಕ್ಷೆ ಮಾಡಲಾಗುವುದೇ; ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು;

ಇಲ್ಲ.

ಅನ್ವಯಿಸುವುದಿಲ್ಲ.

ಉ) ಪಡಿತರ ಚೀಟಿ ಸಂಖ್ಯೆ ಹೆಚ್ಚಾಗಿರುವ ಕಾರಣ, ಫಲಾನುಭವಿಗಳಿಗೆ ತ್ವರಿತವಾಗಿ ಆಹಾರಧಾನ್ಯ ಪಡೆಯಲು ಹೊಸ ಪಡಿತರ ಅಂಗಡಿಗಳನ್ನು ತೆರೆಯುವ ವಿಚಾರ ಸರ್ಕಾರದ ಮುಂದಿದೆಯೇ; ಯಾವಾಗ ಪಡಿತರ ಅಂಗಡಿಗಳನ್ನು ತೆರೆಯಲಾಗುವುದು (ವಿವರ ನೀಡುವುದು)

ಇದೆ.

ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 1992 ರ ಪ್ರಕಾರ ಅಧಿಕೃತ ಪ್ರಾಧಿಕಾರ (Authorized Authority) ತಮ್ಮ ವ್ಯಾಪ್ತಿಯಲ್ಲಿ ಪಡಿತರ ಅಂಗಡಿಗಳನ್ನು ತೆರೆಯುವ ಅವಶ್ಯಕತೆ ಕಂಡು ಬಂದಲ್ಲಿ ಪ್ರಕಟಣೆ ಹೊರಡಿಸಿ ನ್ಯಾಯಬೆಲೆ ಅಂಗಡಿಗಳನ್ನು ಹೆಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ.

151 ಶ್ರೀ ಸಿದ್ದು ಸವದಿ
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು

ಅ) 2009–10ನೇ ಸಾಲಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳು ಯಾವುವು;

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ1 ರಲ್ಲಿ ಒದಗಿಸಿದೆ.

ಆ) ಈ ಇಲಾಖೆಯಿಂದ ನಡೆಸುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಹಾಗಿದ್ದಲ್ಲಿ, ತೇರದಾಳ ಮತಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳೆಷ್ಟು;

ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 54260 ಅಂಗನವಾಡಿ ಕೇಂದ್ರ ಹಾಗೂ 405 ಮಿನಿ ಅಂಗನವಾಡಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. 3ನೇ ಹಂತದಲ್ಲಿ ರಾಜ್ಯಕ್ಕೆ 5786 ಅಂಗನವಾಡಿ ಕೇಂದ್ರ ಹಾಗೂ 2926 ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.
ತೇರದಾಳ್ ಮತ ಕ್ಷೇತ್ರಗಳಲ್ಲಿ ಬರುವ ಅಂಗನವಾಡಿ ಕೇಂದ್ರಗಳ ವಿವರ ಕೆಳಕಂಡಂತಿದೆ.

ತಾಲ್ಲೂಕು	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರಗಳು	ಪ್ರಸಕ್ತ ಸಾಲಿನಲ್ಲಿ ಕಾರ್ಯರಂಭ ಗೊಳ್ಳಲಿರುವ ಕೇಂದ್ರಗಳು	
		ಅಂಗನವಾಡಿ	ಮಿನಿ.ಅಂಗನವಾಡಿ

		ಕೇಂದ್ರ	ಕೇಂದ್ರ
ಜಮಖಂಡಿ	204	07	05
ಮುಧೋಳ್	52	03	--
ಒಟ್ಟು	256	10	05

ಇ) ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಯಾವ ಕ್ರಮ ಅನುಸರಿಸಲಾಗುತ್ತಿದೆ;

ಭಾರತ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಅಂಗನವಾಡಿ ಕೇಂದ್ರ ಪ್ರಾರಂಭಿಸಲು ಜನಸಂಖ್ಯೆ ವಿವರಣೆ ಈ ಕೆಳಕಂಡಂತಿದೆ:-

ನಗರ/ಗ್ರಾಮಾಂತರ ಯೋಜನೆಗಳಲ್ಲಿ

400-800 ಜನಸಂಖ್ಯೆಗೆ -1 ಅಂಗನವಾಡಿ ಕೇಂದ್ರ,

800-1600- 2 ಅಂಗನವಾಡಿ ಕೇಂದ್ರ,

1600-2400- 3 ಅಂಗನವಾಡಿ ಕೇಂದ್ರ,

2400 ಮೀರಿದಲ್ಲಿ ಪ್ರತಿ 800 ಜನಸಂಖ್ಯೆಗೆ ಒಂದು ಅಂಗನವಾಡಿ ಕೇಂದ್ರವನ್ನು ಪ್ರಾರಂಭಿಸಲಾಗುವುದು.

ಮಿನಿ ಅಂಗನವಾಡಿ ಕೇಂದ್ರ

150-400- 1 ಮಿನಿ ಅಂಗನವಾಡಿ ಕೇಂದ್ರ ಗಿರಿಜನ ಯೋಜನೆಯಲ್ಲಿ

ಅ) 300-800- 1 ಅಂಗನವಾಡಿ ಕೇಂದ್ರ,

ಆ) 150-300- 1 ಮಿನಿ ಅಂಗನವಾಡಿ ಕೇಂದ್ರ ಪ್ರಾರಂಭಿಸಲಾಗುವುದು.

ಈ) ಅಂಗನವಾಡಿ ಕೇಂದ್ರಗಳನ್ನು ದೇವಸ್ಥಾನ, ಬಾಡಿಗೆ ಕಟ್ಟಡಗಳಲ್ಲಿ ಬಹುತೇಕ ಕಡೆ ನಡೆಸಲಾಗುತ್ತಿದೆ. ಅವುಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಿ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ;

ಪ್ರಸ್ತುತ 54605 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಅದರಲ್ಲಿ 31077ಕ್ಕೆ ಸ್ವಂತ ಕಟ್ಟಡಗಳಿದ್ದು ಉಳಿದವುಗಳಿಗೆ ನಿವೇಶನ ಮತ್ತು ಅನುದಾನ ಲಭ್ಯತೆಗನುಗುಣವಾಗಿ ನಬಾರ್ಡ್, ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಮತ್ತು ಇಲಾಖಾ ವತಿಯಿಂದ ಕಟ್ಟಡ ನಿರ್ಮಿಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಅಂಗನವಾಡಿ ಕೇಂದ್ರಗಳಿಗೆ ಒದಗಿಸುವ ಸೌಲಭ್ಯಗಳು ಯಾವುವು; ಹಾಗಿದ್ದಲ್ಲಿ ಸೌಲಭ್ಯ ವ್ಯವಸ್ಥೆಗಳ ಸುಧಾರಣೆಗೆ ಯಾವ ಕ್ರಮ ಜರುಗಿಸಲಾಗುತ್ತಿದೆ?

ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಟಿಕ ಆಹಾರ, ಶಾಲಾ ಪೂರ್ವ ಶಿಕ್ಷಣ, ರೋಗನಿರೋಧಕ ಚುಚ್ಚುಮದ್ದು, ಆರೋಗ್ಯ ತಪಾಸಣೆ, ಪೌಷ್ಟಿಕ ಆಹಾರ ಆರೋಗ್ಯ ಶಿಕ್ಷಣ ಹಾಗೂ ಮಾಹಿತಿ ಸೇವೆ ನೀಡಲಾಗುತ್ತಿದೆ;

ಅಂಗನವಾಡಿ ಕೇಂದ್ರಗಳಲ್ಲಿ ನೀಡುತ್ತಿರುವ ಸೌಲಭ್ಯ ವ್ಯವಸ್ಥೆಗಳ ಸುಧಾರಣೆಗಾಗಿ ನಿಯಮಿತವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಪ್ರತಿ ಅಂಗನವಾಡಿ ಕೇಂದ್ರಕ್ಕೆ ಬಾಲವಿಕಾಸ ಸಮಿತಿಯನ್ನು ರಚಿಸಿದೆ. ಸಮಿತಿಯ ಸದಸ್ಯರುಗಳಿಗೆ ತರಬೇತಿ ನೀಡಲಾಗಿದ್ದು, ಈ ಸಮಿತಿಯು ಗ್ರಾಮ ಮಟ್ಟದಲ್ಲಿ ಅಂಗನವಾಡಿ ಕೇಂದ್ರ ಮೇಲ್ವಿಚಾರಣೆ ಮಾಡುತ್ತಾ ಕೇಂದ್ರದಿಂದ ನೀಡುತ್ತಿರುವ ಸೌಲಭ್ಯಗಳನ್ನು ಫಲಾನುಭವಿಗಳಿಗೆ ದೊರಕಿಸಲು ಸಹಕರಿಸುತ್ತದೆ. ಇದಲ್ಲದೆ ತಾಲ್ಲೂಕು /ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ಸಮನ್ವಯ ಸಮಿತಿಗಳನ್ನು ರಚಿಸಲಾಗಿದೆ.

ಅನುಬಂಧ–1

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು.

I ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು:

1. ಸ್ತ್ರೀಶಕ್ತಿ ಯೋಜನೆ
2. ಸಾಂತ್ವನ
3. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ
4. ಕಾನೂನು ಪದವಿ ಪಡೆದ ಮಹಿಳೆಯರಿಗೆ ಆರ್ಥಿಕ ನೆರವು
5. ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ರಕ್ಷಿಸುವ ಕಾಯ್ದೆ, 2005
6. ಕರ್ನಾಟಕ ವಿವಾಹ ನೋಂದಾಣಿ ಕಾಯ್ದೆ, 1976
7. ನಿರ್ಗತಿಕ ವಿಧವೆಯರ ಹಾಗೂ ದೇವದಾಸಿಯರ ಮರು ವಿವಾಹಕ್ಕೆ ಆರ್ಥಿಕ ನೆರವು

ಕೇಂದ್ರ ವಲಯ ಕಾರ್ಯಕ್ರಮಗಳು :

1. ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು
2. ಸ್ವಾಧಾರ
3. ಮದ್ಯ ಮತ್ತು ಮಾದಕ ವಸ್ತುಗಳ ದುರುಪಯೋಗವನ್ನು ತಡೆಗಟ್ಟಲು ಸಹಾಯ

II. ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು :

1. ಭಾಗ್ಯಲಕ್ಷ್ಮಿ ಯೋಜನೆ

2. ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆ
3. ಚೈಲ್ಡ್ ಟ್ರ್ಯಾಕಿಂಗ್ ಪದ್ಧತಿ
4. ಬಾಲಕಿಯರ ವಸತಿ ನಿಲಯಗಳು
5. ಮಕ್ಕಳ ಪಾಲನೆ ಪೋಷಣೆ ಅಗತ್ಯವಿರುವ ಮಕ್ಕಳ ಕಲ್ಯಾಣ ಯೋಜನೆ
6. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರಿಗೆ ಹಾಜರಾತಿ ಶಿಷ್ಯ ವೇತನ
7. ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳು
8. ಬಾಲ್ಯವಿವಾಹ ನಿಷೇಧ ಕಾಯ್ದೆ, 2006 (ಕೇಂದ್ರ ಕಾಯ್ದೆ) 2006
9. ಧೈರ್ಯ ಸಾಹಸ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು
10. ಮಹಿಳೆಯರ ಮತ್ತು ಮಕ್ಕಳ ಸಾಗಣೆ ತಡೆಗಟ್ಟುವ ಯೋಜನೆ
11. ಬಾಲ ವಿಕಾಸ ಅಕಾಡೆಮಿ:
12. ಏಡ್ಸ್ ಖಾಯಿಲೆಯಿಂದ ಬಾಧಿತರಾದ ಮಕ್ಕಳಿಗೆ ಸಂರಕ್ಷಣಾ ಕೇಂದ್ರಗಳು

ಕೇಂದ್ರ ವಲಯ ಕಾರ್ಯಕ್ರಮಗಳು:

1. ಸಮಗ್ರ ಶಿಶು ಅಭಿವೃದ್ಧಿ ಯೋಜನೆ
2. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ತರಬೇತಿ ಕಾರ್ಯಕ್ರಮ
3. ಕಿಶೋರಿ ಶಕ್ತಿ ಯೋಜನೆ

III. ಸಾಮಾಜಿಕ ರಕ್ಷಣೆಯ ಕಾರ್ಯಕ್ರಮಗಳು:

1. ಬಾಲ ನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಕಾಯಿದೆ 2000 ಹಾಗೂ ತಿದ್ದುಪಡಿ 2006:

ಅ. ವೀಕ್ಷಣಾಲಯಗಳು
ಆ. ಬಾಲ ಮಂದಿರಗಳು
ಇ. ಅರ್ಹ ಸಂಸ್ಥೆಗಳು
ಈ. ಬಾಲ ನ್ಯಾಯ ಕಾಯ್ದೆ ಕಾರ್ಯಕ್ರಮ (ಕೇಂದ್ರ ಪುರಸ್ಕೃತ) ಯೋಜನೆ
ಉ. ಸುಧಾರಣಾ ಸಂಸ್ಥೆ ನಿವಾಸಿಗಳಿಗೆ ಕೌಶಲ್ಯಾಭಿವೃದ್ಧಿ ಯೋಜನೆಯಡಿ ತರಬೇತಿ
ಊ. ಕುಟುಂಬದ ವಾತಾವರಣದಲ್ಲಿ ಮಕ್ಕಳನ್ನು ಬೆಳೆಸಲು ಪ್ರಾಯೋಜಿತ ಕಾರ್ಯಕ್ರಮ

2. ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ 1956

3. ಅನೈತಿಕ ವ್ಯವಹಾರಗಳ (ತಡೆಗಟ್ಟುವುದು) ಅಧಿನಿಯಮ 1956 ಮತ್ತು ಸಾಮಾಜಿಕ ಹಾಗೂ ನೈತಿಕ ಆರೋಗ್ಯ ಕಾರ್ಯಕ್ರಮಗಳು:

ಅ. ಸ್ವೀಕಾರ ಕೇಂದ್ರಗಳು

ಆ. ರಾಜ್ಯ ಮಹಿಳಾ ನಿಲಯಗಳು

ಇ. ಅನುಪಾಲಾನಾ ಸೇವೆಗಳು

ಈ. ಬುದ್ಧಿ ಮಾಂದ್ಯ ಮಕ್ಕಳ ಅನುಪಾಲಾನ ಗೃಹ

6. ಇತರೆ ಕಾರ್ಯಕ್ರಮಗಳು:

ಅ) ಮಕ್ಕಳ ಸಹಾಯವಾಣಿ ಸೇವೆ

ಆ) ದತ್ತು ಸ್ವೀಕಾರ

ಇ) ಸ್ವದೇಶಿ ದತ್ತು ಕಾರ್ಯಕ್ರಮ ಪ್ರೋತ್ಸಾಹಿಸಲು ಸಂಸ್ಥೆಗಳಿಗೆ ಆರ್ಥಿಕ ಸಹಾಯ ಯೋಜನೆ (ಶಿಶು ಗೃಹ):

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು

1. ಉದ್ಯೋಗಿನಿ
2. ಆಸರೆ
3. ಮಹಿಳಾ ತರಬೇತಿ ಯೋಜನೆ
4. ರಾಜ್ಯ ಸಂಪನ್ಮೂಲ ಕೇಂದ್ರ (ಮಹಿಳಾ ಸ್ವಯಂ ಉದ್ಯೋಗ ಕೇಂದ್ರ ನಿರ್ವಹಣೆ)
5. ಮಾರುಕಟ್ಟೆ ನೆರವು ಯೋಜನೆ
6. ದೇವದಾಸಿ ಪುನರ್ವಸತಿ ಯೋಜನೆ ಹಾಗೂ ಮಾಶಾಸನ ಯೋಜನೆ

304 ಶ್ರೀ ಶ್ರೀನಿವಾಸ ಎಂ. (ಮಂಡ್ಯ)
ಕೃಷಿ ಸಚಿವರು

ಅ) ರಾಜ್ಯದ ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ವರ್ಗವಾರು ವಿವರ ನೀಡುವುದು)

3325

1) ಗ್ರೂಪ್-ಎ – 65
2) ಗ್ರೂಪ್-ಬಿ – 1471
3) ಗ್ರೂಪ್-ಸಿ – 1497
4) ಗ್ರೂಪ್-ಡಿ – 292